ದಿ:- 19-08-2026 ಕ್ರಮ ಸಂ : 14

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಸೂಚನೆಗೆ ಸರ್ಕಾರದ ಉತ್ತರ.

**ಸೂಚನೆ:**

ಕಲಬುರ್ಗಿ ಜಿಲ್ಲೆಯ 110 ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ (ಎಂ ಎಸ್ ಎಂ ಇ) ಬರಬೇಕಿರುವ ರೂ.50.00 ಕೋಟಿ ಸಹಾಯಧನ ಬಿಡುಗಡೆ ಕುರಿತು ಪ್ರಸ್ತಾಪಿಸಿರುವ ವಿಷಯ.

**ಸರ್ಕಾರದ ಉತ್ತರ:**

ಕೈಗಾರಿಕಾ ನೀತಿಗಳಡಿಯಲ್ಲಿ ಬಂಡವಾಳ ಹೂಡಿಕೆ ಸಹಾಯಧನವನ್ನು ಮಂಜೂರಾತಿಯಾದ ನಂತರ ಘಟಕಗಳ ವಾರ್ಷಿಕ ವಹಿವಾಟು ಆಧರಿಸಿ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತದೆ. ವಿವಿಧ ಕೈಗಾರಿಕಾ ನೀತಿಗಳಡಿಯಲ್ಲಿ ರಾಜ್ಯದಲ್ಲಿ 2020-21 ರಿಂದ 2025-26 ರವರೆಗೆ ಒಟ್ಟು 6333 ಘಟಕಗಳಿಗೆ ರೂ.3353.38 ಕೋಟಿ ಮಂಜೂರಾತಿಯಾಗಿರುತ್ತದೆ. ಇಲ್ಲಿಯವರೆಗೆ 2617 ಘಟಕಗಳಿಗೆ ರೂ. 473.19 ಕೋಟಿ ಸಹಾಯಧನ ಬಿಡುಗಡೆಯಾಗಿರುತ್ತದೆ. ಬಾಕಿ 3716 ಘಟಕಗಳಿಗೆ ರೂ.2880.18 ಕೋಟಿ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ. ಈ ಸಹಾಯಧನವನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಮೇರೆಗೆ ಘಟಕಗಳಿಗೆ ಬಿಡುಗಡೆ ಮಾಡಲಾಗುತ್ತದೆ.

ಕಲಬುರ್ಗಿ ಜಿಲ್ಲೆಗೆ ಸಂಬಂಧಿಸಿದಂತೆ 2020-21 ರಿಂದ 2025-26 ನೇ ಸಾಲಿನವರೆಗೆ ಸಹಾಯಧನ ಮಂಜೂರಾಗಿರುವ ಘಟಕಗಳ ಪೈಕಿ 88 ಘಟಕಗಳಿಗೆ ರೂ.53.86 ಕೋಟಿ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ.

ಸಹಾಯಧನ ಬಿಡುಗಡೆಯು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಮತ್ತು ಘಟಕಗಳ ವಾರ್ಷಿಕ ವಹಿವಾಟಿನ ಆಧಾರದ ಮೇಲ ಬಿಡುಗಡೆ ಮಾಡುವ ಕಾರಣದಿಂದ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ.

**ಸಿಐ 177 ಎಸ್ಎಸ್ಐ 2026**

**(ವಿಜಯಾನಂದ ಕಾಶಪ್ಪನವರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು